ಉಪಾಧ್ಯಕ್ಷರು : ತಮ್ಮ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ಸದಸ್ಯರು ಹೊಸದಾಗಿ ಬಂದಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ರೆವಿನ್ಯೂ ಮತ್ತು ಹೆಚ್‌ಯುಡಿ ಎರಡೂ ಸೇರಿ ರೆವಿನ್ಯೂ ದಾಖೆಯಲ್ಲಿರತಕ್ಕ ಜಾಗದಲ್ಲಿ ಮನೆಗಳನ್ನು ಕಟ್ಟಿ ಆಗಿದೆ. ಅದಕ್ಕೆ ನೀರು ಮತ್ತು ಕರೆಂಟ್ ಕೊಟ್ಟಿದ್ದೀರಿ. ಕೆಲವರಿಗೆ ಕೊಟ್ಟಿಲ್ಲ. ಇವತ್ತು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಬೆಳೆ ಬೆಳೆಯುತ್ತಿದ್ದಾರೆಂದು ರೆವಿನ್ಯೂ ದಾಖಲಾತಿಯಲ್ಲಿ ರಿಜಿಸ್ಟರ್ ಆಗುತ್ತಿದೆ. ಇದು ಏನು ಅವ್ಯವಹಾರ ಎಂದು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೊಸದಾಗಿ ಬಂದಿರುವುದರಿಂದ ಏನೋ ಒಂದು ರೀತಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಮಾರ್ಗದರ್ಶನ ಮಾಡಬೇಕು. ಹೊಸದಾಗಿ ಬಂದಿದ್ದೀರಿ, ಕುಳಿತುಕೊಳ್ಳಿ ಎಂದರೆ ಆಗುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ. ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991 ದಿನಾಂಕ 1.8.92 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಅಧಿನಿಯಮದ ಅನ್ವಯ ದಿನಾಂಕ 31.3.90ಕ್ಕೆ ಮೊದಲು ನಿರ್ಮಿಸಲಾದ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಪರಿಗಣಿಸಬಹುದಾಗಿದ್ದು, ಅದರಂತೆ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ವ್ಯಕ್ತಿಯ ಒಡೆತನದಲ್ಲಿರುವ ರೆವಿನ್ಯೂ ನಿವೇಶನ ಅಥವಾ ಯಾವುದೇ ಪ್ರಾಧಿಕಾರವು ತನ್ನ ಯೋಜನೆಗೆ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದು ಅಂತಹ ಭೂಮಿಯ ಕಬ್ಜೆಯನ್ನು ಪಡೆಯದಿದ್ದ ಭೂಮಿಯ ಮೇಲೆ ನಿರ್ಮಿಸಿದ್ದ ಅನಧಿಕೃತ ನಿರ್ಮಾಣಗಳನ್ನು ನಿವೇಶನದೊಡನೆ ಸಕ್ರಮಗೊಳಿಸಲು ಅವಕಾಶವಿದೆ. ಆದರೆ ಯಾವುದೇ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಈ ಇಲಾಖೆಯ ವ್ಯಾಪ್ತಿಗೆ ಸೇರಿದ್ದಲ್ಲ.

ಸರ್ಕಾರದ ಸುತ್ತೋಲೆ ಸಂಖ್ಯೆ 11 ಎಂಐಬಿ 94 ದಿನಾಂಕ 22.10.94ರ ಪ್ರಕಾರ ಈ ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ವಿದ್ಯುಚ್ಛಕ್ತಿ ಸರಬರಾಜು ಮಾಡಿರುವ ಕಟ್ಟಡಗಳಿಂದ ವಿದ್ಯುತ್‌ಚ್ಛಕ್ತಿ ಸರಬರಾಜನ್ನು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಬಂದಿರುವ ಅರ್ಜಿಗಳು ವಿಲೇವಾರಿ ಆಗುವವರೆಗೆ ರದ್ದುಪಡಿಸಬಾರದೆಂದೂ ಮತ್ತು ಹೊಸದಾಗಿ ವಿದ್ಯುತ್‌ಚ್ಛಕ್ತಿ ಸರಬರಾಜಿಗಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಿ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ನಿಯಮಗಳಿಗೆ ಒಳಪಡಿಸಿ ವಿದ್ಯುತ್‌ಚ್ಛಕ್ತಿ ಸರಬರಾಜು ನೀಡಬಹುದೆಂತಲೂ ಸೂಚನೆ ನೀಡಲಾಗಿದೆ.

ಇದಾದ ನಂತರ ಯಾವುದೇ ರೀತಿಯ ದೂರು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

12.45 ಪಿ.ಎಂ.

6. ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಶ್ರೀರಾಮ ಸಕ್ಕರೆ ಕಾರ್ಖಾನೆ

ಶ್ರೀ ಸಿ.ಎಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೆ, ನನ್ನ ಭಾಗದ ಕೆ.ಆರ್. ನಗರ ತಾಲ್ಲೂಕಿನಲ್ಲಿ ಶ್ರೀರಾಮ ಸಕ್ಕರೆ ಫ್ಯಾಕ್ಟರಿ ಏನಿದೆ ಅದರಲ್ಲಿ ಅರೆಯಬೇಕಾದ ಕಬ್ಬು ಏನಿದೆ ಅದರಲ್ಲಿ ತಾಂತ್ರಿಕ ದೋಷದಿಂದ ಅರ್ಧ ಭಾಗ ಮಾತ್ರ ಅರೆಯುವುದಕ್ಕೆ ಸಾಧ್ಯವಾಗುತ್ತಿದೆ. 1400-1500 ಟನ್ ದಿನನಿತ್ಯ ಅರೆಯಬೇಕಾದ ಕಂಪೆನಿ ಕೇವಲ 750-800 ಟನ್ ಮಾತ್ರ ಕಬ್ಬನ್ನು ಅರೆಯುವಂಥ ವ್ಯವಸ್ಥೆ ಇರುವುದರಿಂದ ಉಳಿದಂಥ ಕಬ್ಬನ್ನು ಕಟಾವು ಮಾಡಲಿಕ್ಕೆ ಪರ್ಮಿಟ್ ಸಿಗದೆ

ಅನುಮತಿ ಸಿಗದೇ ಇರುವುದರಿಂದ ರೈತರು ತುಂಬಾ ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿರುವುದರಿಂದ ನಮ್ಮ ಭಾಗದ ರೈತರು ಬೇರೆ ಸಕ್ಕರೆ ಕಂಪೆನಿಗಳಿಗೆ ಪಾಂಡವಪುರ ಸಕ್ಕರೆ ಕಾರ್ಖಾನೆಯನೆಯಾಗಲೀ ಕೊನಾರಿ ಸಕ್ಕರೆ ಕಂಪೆನಿಗೆ ಆಗಲೀ ಕಬ್ಬನ್ನು ಕಟಾವು ಮಾಡಿ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಸರಕಾರವನ್ನು ಕೇಳುತ್ತಿದ್ದಾರೆ. ಜೊತೆಗೆ ಈಗ ಪರ್ಮಿಟ್ ಸಿಗದೆ 16, 17, 18 ತಿಂಗಳು ಕಬ್ಬು ಕಟಾರು ಮಾಡುವುದಕ್ಕೆ ಆಗದೆ ರೈತರು ಕಂಗಾಲಾಗಿ ಏನು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ ಇದರ ಬಗ್ಗೆ ಸರ್ಕಾರದ ನಿಲುವು ಏನು? ಮತ್ತು ಜೊತೆಗೆ ರೈತರಿಗೆ ಏನಾದರೂ ಬದಲಿ ವ್ಯವಸ್ಥೆ ಮಾಡಲಿಕ್ಕೆ ಏನಾದರೂ ಯೋಚನೆ ಮಾಡುತ್ತೀರಾ ಎಂಬ ಮಾಹಿತಿಯನ್ನು ಸರ್ಕಾರ ಕೊಡಬೇಕೆಂದು ನಾನು ಬೇಡಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಸಿ ಸಿದ್ದನಗೌಡರ್ : (ಸಕ್ಕರೆ, ಜವಳಿ, ವಿಜ್ಞಾನತಂತ್ರಕಲೆ ಹಾಗೂ ಪರಿಸರ ಮತ್ತು ಜೀವಶಾಸ್ತ್ರ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಮೇರೆಗೆ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಶ್ರೀರಾಮ ಸಕ್ಕರೆ ಕಾರ್ಖಾನೆಯು ಸಹಕಾರಿ ಕ್ಷೇತ್ರದಲ್ಲಿರುತ್ತದೆ. ಈ ಕಾರ್ಖಾನೆಯು 1978-79ನೇ ಸಾಲಿನಲ್ಲಿ ಸ್ಥಾಪಿತವಾಗಿದ್ದು. ಇದರ ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ 1250 ಟನ್‌ಗಳಾಗಿರುತ್ತದೆ. ಈ ಕಾರ್ಖಾನೆಯು ತನ್ನ ಸಾಮರ್ಥ್ಯದ ಪ್ರಕಾರ ಪ್ರತಿದಿನ 1250 ಟನ್ ಕಬ್ಬನ್ನು ಅರೆಯಬೇಕಾಗಿರುತ್ತದೆ.

1994-95ನೇ ಸಾಲಿನಲ್ಲಿ ಕಬ್ಬು ಅರೆಯುವಿಕೆಯನ್ನು ದಿನಾಂಕ23-6-1994 ರಂದು ಪ್ರಾರಂಭಿಸಿರುತ್ತದೆ. ದಿನಾಂಕ 23-7-1994 ರಂದು ಟರ್ಬೈನ್‌ನ ರೋಟಾರ್ ಬ್ಲೇಡುಗಳು ಮುರಿದಿದ್ದರಿಂದ ಅದನ್ನು ಸರಿಪಡಿಸುವ ಕ್ರಮ ಕೈಗೊಂಡು ದಿನಾಂಕ 27-7-1994 ರಂದು ಕಬ್ಬು ಅರೆಯುವ ಕೆಲಸ ಪ್ರಾರಂಭಿಸಲಾಯಿತು. ಆದರೆ 5 ದಿನಗಳಲ್ಲೇ ಟರ್ಬೈನ್ ಪುನಃ ಕೆಟ್ಟಿತು. ಇದನ್ನು ಬ್ಯಾಲೆನ್ಸ್ ಮಾಡಿಸಿ ದಿನಾಂಕ 5-8-1994 ರಂದು ಕಬ್ಬು ಅರೆಯುವಿಕೆಯನ್ನು ಪುನರಾರಂಬಿಸಲಾಯಿತು. ಅದಾಗ್ಯೂ ಟರ್ಬೈನ್‌ನ ರೋಟಾರ್ ಬ್ಲೇಡುಗಳು ಮುರಿದಿದ್ದರಿಂದ ಕಬ್ಬು ಅರೆಯುರ ಕಾರ್ಯ ತಾ. 27.9.94ರಿಂದ ಸ್ಥಗಿತಗೊಂಡಿತು. ಹೊಸ ಟರ್ಬೈನ್ ಅನ್ನು ಖರೀದಿಸಲು ಅಂದಾಜು ರೂ. 90 ಲಕ್ಷಗಳು ವೆಚ್ಚವಾಗುತ್ತಿದ್ದುದರಿಂದ ಹಾಗೂ ಹೊಸ ಟರ್ಬೈನ್ ಅನ್ನು ಅಳವಡಿಸಲು ಸುಮಾರು $5\frac{1}{2}$ ತಿಂಗಳುಗಳು ಬೇಕಾಗಿದ್ದುದರಿಂದ ಕಬ್ಬು ಬೆಳೆಗಾರರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಸುಗಮವಾಗಿ ಕಬ್ಬು ಅರೆಯುವ ವ್ಯವಸ್ಥೆಗಾಗಿ ಬೇರೆ ಸಿದ್ಧಗಿರುವ ಟರ್ಬೈನ್ ಅನ್ನು ಬಾಡಿಗೆಗೆ ಅಥವಾ ಖರೀದಿಗೆ ಪಡೆಯುವ ಪ್ರಯತ್ನ ನಡೆಸಲಾಯಿತು. ಆದರೆ, ಬಾಡಿಗೆಗೆ ಅಥವಾ ಖರೀದಿಗೆ ಸಿಕ್ಕದಿದ್ದುದರಿಂದ 14ಬ್ಲೇಡುಗಳು ಮುರಿದಿದ್ದ ಟರ್ಬೈನ್ ರೋಟರ್ ಅನ್ನು ಹೈದರಾಬಾದಿಗೆ ಕಳುಹಿಸಿ ರಿಪೇರಿ ಮಾಡಿಸಿ ದಿನಾಂಕ 9-11-1994ರಿಂದ ಪುನರಾರಂಭಿಸಲಾಯಿತು. ರಿಪೇರಿ ಮಾಡಿಸಿದ ನಂತರ ಕಾರ್ಖಾನೆಯು ಈ ಕೆಳಕಂಡಂತೆ ಕಬ್ಬು ಅರೆದಿರುತ್ತದೆ.

ದಿ:	15-11-94	-	1113 ಮೆ. ಟನ್‌ಗಳು
	20-11-94	-	1257 "
	22-11-94	-	129 "
	01-12-94	-	1148 "
	12-12-94	-	603 "
	13-12-94	-	653 "

18-12-94	1148 "
20-12-94	1020 "

ದಿನಾಂಕ 20-12-1994ರವರೆವಿಗೆ ಒಟ್ಟು 125156 ಟನ್ ಕಬ್ಬನ್ನು ಅರೆದಿರುತ್ತದೆ.

ಯಾಂತ್ರಿಕ ಅಡಚಣೆಗಳಿಂದಾಗಿ ಕಾರ್ಖಾನೆಯ ಕಬ್ಬು ಅರೆಯುವ ಕೆಲಸವು ಸುಗಮವಾಗಿ ಸಾಗದೆ ಕಬ್ಬು ಅರೆಯುವ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ.

ಹೊಸ ಟರ್ಬೈನ್‌ನ್ನು ಅಳವಡಿಸಿದರೆ ಹಂಗಾಮು ಪೂರ್ಣ ಕಬ್ಬು ಅರೆಯುವಿಕೆ ಸ್ಥಗಿತಗೊಳ್ಳುತ್ತಿದ್ದುದರಿಂದ ರೈತರ ಹಿತದೃಷ್ಟಿಯಿಂದ ರಿಪೇರಿ ಮಾಡಿಸಿ ಪುನರಾರಂಭಿಸಲಾಯಿತು. ದಿನವಹಿ ಕಬ್ಬು ಅರೆಯುವಿಕೆ ಸರಾಸರಿ 1000 ಟನ್ ಮೇಲೆ ಇದ್ದು ಇದನ್ನು ಹೆಚ್ಚಿಸಲು ಪ್ರಯತ್ನ ನಡೆದಿದೆ. ಪ್ರಸಕ್ತ ಹಂಗಾಮಿನಲ್ಲಿ ಬೆಲ್ಲದ ಬೆಲೆ ಪ್ರೋತ್ಸಾಹದಾಕವಾಗಿಲ್ಲದಿರುವುದರಿಂದ ಬೆಲ್ಲ ತಯಾರಿಕೆಗೆ ಸ್ಥಾನ ಪಲ್ಲಟವಾಗುತ್ತಿದ್ದ ಕಬ್ಬಿನ ಪ್ರಮಾಣ ಸಾಕಷ್ಟು ಕಡಿಮೆಯಾಗಿದೆ. ಇದರಿಂದಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿರುವ ಕಾರ್ಖಾನೆಗಳ ಮೇಲೆ ಒತ್ತಡ ಜಾಸ್ತಿಯಾಗಿರುವುದು ಕಂಡು ಬಂದಿದೆ. ಈ ಕಾರ್ಖಾನೆಯು ನೋಂದಾಯಿಸಿಕೊಂಡಿರುವ ಕಬ್ಬನ್ನು ಆದಷ್ಟು ಸಕಾಲದಲ್ಲಿ ಅರೆಯುವ ವ್ಯವಸತೆಗೆ ಕ್ರಮವಿಡಲಾಗುವುದು ಜೊತೆಗೆ ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದಿರುವ ಕಬ್ಬನ್ನು ಸಮೀಪದ ಕಾರ್ಖಾನೆಗಳ ಬೇಡಿಕೆಯನ್ನು ಪರಿಶೀಲಿಸಿ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸೂಕ್ತ ಕ್ರಮವಿಡಲಾಗುವುದು.

7. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಶೆಟ್ಟಿಕೆರೆ, ಹೋಬಳಿಗಳಲ್ಲಿ ಮಳೆಯಾಗದೆ ಮೇವಿನ ಅಭಾವ

ಶ್ರೀ ಎನ್. ಬಸವಯ್ಯ : ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಶೆಟ್ಟಿಕೆರೆ, ಹೋಬಳಿಗಳಲ್ಲಿ ಮಳೆಯಾಗದೆ ಮೇವಿನ ಅಭಾವ ನೀರಿನ ಅಭಾವ ಉಂಟಾಗಿದೆ. ಜನಗಳಿಗೆ ಕೆಲಸ ಇಲ್ಲದೆ ಅಭಾವ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿದೆ. ಆದರೆ ಅಭಾವ ಪರಿಸ್ಥಿತಿ ಬರುವಂತಹ ಸಂದರ್ಭ ಏನು ಕಾಣಲಿಲ್ಲ. ಕೆರೆಗಳಲ್ಲಿ ನೀರಿಲ್ಲ ನಿಜ. ಆದರೆ ಜನಗಳಿಗೆ ಕುಡಿಯುವ ನೀರಿನ ತೊಂದರೆಯಾಗಿಲ್ಲ. ಅಂತಹ ಸಮಯ ಬಂದರೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರಿಗೆ ಹೇಳಿ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದು ಅವರನ್ನು ಕೇಳಿಕೊಳ್ಳುತ್ತೇವೆ. ಈಗ ಸದ್ಯಕ್ಕಂತೂ ಅಂತಹ ಪರಿಸ್ಥಿತಿ ಏನು ಅಲ್ಲಿ ಉದ್ಭವವಾಗಿಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಉಪಾಧ್ಯಕ್ಷರು : ಒಂದು ವಿಷಯ. ಸಮಯವನ್ನು ನಿಗದಿ ಮಾಡಿರುವ ಪ್ರಕಾರ ಜನತಾ ದಳದ ಸದಸ್ಯರಿಗೆ 5 ಗಂಟೆ. ಅದರಲ್ಲಿ 2 ಗಂಟೆಯನ್ನು ಈಗಾಗಲೇ ಅವರು ಪೂರೈಸಿದ್ದಾರೆ. ಬಿ.ಜೆ.ಪಿಯವರಿಗೆ 4 ಗಂಟೆ, ಅದರಲ್ಲಿ 1-30 ಗಂಟೆಯನ್ನು ಅವರು ಪೂರೈಸಿದ್ದಾರೆ. ಕಾಂಗ್ರೆಸ್ ಸದಸ್ಯರಿಗೆ 4 ಗಂಟೆ. ಕೆ.ಸಿ.ಪಿ.ಯವರಿಗೆ 1 ಗಂಟೆ. ಸ್ವತಂತ್ರ ಸದಸ್ಯರಿಗೆ 2 ಗಂಟೆ. ಇದು ನಿಮ್ಮ ನಿಗಧಿತ ಕಾರ್ಯಕ್ರಮ. ಒಂದು ವೇಳೆ ಈ ನಿಗಧಿತ ಸಮಯದಲ್ಲಿ ಅಂದರೆ ನಾಳೆ ಸಂಜೆಯೊಳಗೆ ಪೂರೈಸತಕ್ಕಂತಹದ್ದು ಅತೀ ಅವಶ್ಯ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಸಹಕಾರ ಕೊಡಬೇಕು. ಸಮಯವನ್ನು ಸೀಮಿತಗೊಳಿಸಬೇಕು. ಈಗ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಬೇಕು.